ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಜನವರಿ 1993ರರಿಂದ ಡಿಸೆಂಬರ್ ಅಂತ್ಯದವರೆಗೆ 29,482ನಕಲಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ವಜಾ ಮಾಡಲಾಗಿದೆ.

ಆ) ಇಲ್ಲ

ಇ) ಹೌದು. ಅಂತಹ ಪ್ರಕರಣಗಳಲ್ಲಿ ವಾಸ ಮಾಡದೇ ಇರತಕ್ಕ ಜನರ ಹೆಸರುಗಳನ್ನು ವಜಾ ಮಾಡಲಿಲ್ಲ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲಾ ಕಾರ್ಡುದಾರರು ಕಾರ್ಡಿನಲ್ಲಿ ಸೇರಿಸಲಾಗಿರುವ ಹೆಚ್ಚುವರಿ ಹೆಸರುಗಳನ್ನು ವಜಾ ಮಾಡಿಸಿಕೊಳ್ಳಲು ಮುಕ್ತ ಅವಕಾಶವಿರುತ್ತದೆ.

ಈ) ಒಬ್ಬ ವಯಸ್ಕ ವ್ಯಕ್ತಿಗೆ 2 ಯೂನಿಟ್ ಗಳಂತೆ ಜನವರಿ 93ರಿಂದ ಡಿಸೆಂಬರ್ 93 ರವರೆಗೆ ಒಟ್ಟು 17,504 ಯೂನಿಟ್ ಗಳನ್ನು ಪತ್ತೆ ಹಚ್ಚಿ ವಜಾ ಮಾಡಲಾಗಿದೆ.

ಉ) ಹೌದು.

ಬೆಂಗಳೂರು ನಗರದಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯುವುದು

59-ಶ್ರೀ ಆರ್.ವಿ. ದೇವರಾಜ್(ಚಾಮರಾಜಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಪಡಿತರ ಸಂಖ್ಯೆ ಎಷ್ಟು?

ಆ) ಅವುಗಳಿಗೆ ಆಹಾರ ಸಾಮಗ್ರಿಗಳನ್ನು ಒದಗಿಸಲು ತೆರೆದಿರುವ ಒಟ್ಟು ನ್ಯಾಯ ಬೆಲೆ ಅಗಡಿಗಳೆಷ್ಟು?

ಇ) ಅವುಗಳ ಪೈಕಿ ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು?

ಈ) 1993ರಲ್ಲಿ ಹೊಸದಾಗಿ ಎಷ್ಟು ನ್ಯಾಯಬೆಲೆ ಅಂಗಡಿಗಳನ್ನು ಬೆಂಗಳೂರಿನಲ್ಲಿ ತೆರೆಯಲಾಗಿದೆ?

ಉ) 1994 ರಲ್ಲಿ ಹೊಸದಾಗಿ ತೆರೆಯ ಬೇಕೆಂದಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು?

ಊ) ಈ ನ್ಯಾಯಬೆಲೆ ಅಂಗಡಿಗಳನ್ನು ನಿರುದ್ಯೋಗಿ ಯುವಕರಿಗೆ ಮಂಜೂರು ಮಾಡಲು ಸರ್ಕಾರ ಆಲೋಚಿಸಿರುವುದೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 8,64.497 ಪಡಿತರ ಚೀಟಿಗಳು (ದಿನಾಂಕ 31-01-94ರಲ್ಲಿದ್ದಂತೆ)

ಆ) 1611

ಇ) 48

ಈ) 09

ಉ) ಸದ್ಯದಲ್ಲಿ ನಿರ್ಧರಿಸಲಾಗುವುದು.

ಊ) ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣ ಆದೇಶ 1992ರ ಪ್ರಕಾರ ನ್ಯಾಯ ಬೆಲೆ ಅಂಗಡಿಗಳನ್ನು ಮಂಜೂರು ಮಾಡುವಲ್ಲಿ ನಿರುದ್ಯೋಗಿ ಯುವಕರಿಗೆ ಸ್ಪಷ್ಟ ಪ್ರಾತಿನಿಧ್ಯ ನೀಡಿಲ್ಲ. ಆದರೆ ಇತರ ಖಾಸಗೀ ವ್ಯಕ್ತಿಗಳಿಗೆ

ನ್ಯಾಯಬೆಲೆ ಅಂಗಡಿ ಮಂಜೂರು ಮಾಡುವಾಗ ಇವರುಗಳ ಅರ್ಜಿಗಳನ್ನು ಪರಿಗಣಿಸಲಾಗುತ್ತಿದೆ.

ಬೆಳಗಾಂ ಜಿಲ್ಲೆಯಲ್ಲಿ ಗೋವಿನ ಜೋಳವನ್ನು ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರ ಸರ್ಕಾರದವರು ಖರೀದಿಸಿದ್ದು ರೈತರಿಗೆ ಹಣ ಕೊಡದೆ ಇರುವುದು.

68 - ಶ್ರೀ ಶಿವಾನಂದ ಹೆಚ್. ಕೌಜಲಗಿ, (ಬೈಲಹೊಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ನಿರ್ದೇಶಕರು ಬೆಳಗಾಂ ಜಿಲ್ಲೆಯಲ್ಲಿ ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರ ಗೋವಿನ ಜೋಳವನ್ನು ಖರೀದಿ ಮಾಡಿದ ಸಂಗತಿ ನಿಜವೇ?*

ಆ) *ಹಾಗಿದ್ದಲ್ಲಿ, ಎಷ್ಟು ಗೋವಿನ ಜೋಳವನ್ನು ಆ ಫೆಡರೇಷನ್ ಮುಖಾಂತರ ಖರೀದಿ ಮಾಡಿರುವುದು.*

ಇ) *ಈಗಾಗಲೇ ಮಾರ್ಕೆಟಿಂಗ್ ಫೆಡರೇಷನ್ನವರಿಗೆ ಸರ್ಕಾರದವರು ಗೋವಿನ ಜೋಳವನ್ನು ಖರೀದಿಸುವ ಸಲುವಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಿರುವರು.*

ಈ) *ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ವತಿಯಿಂದ ಗೋವಿನ ಜೋಳವನ್ನು ಖರೀದಿ ಮಾಡಿದರೂ ಇದುವರೆಗೂ ಹಣವನ್ನು ರೈತರಿಗೆ ಮಾರ್ಕೆಟಿಂಗ್ ಫೆಡರೇಷನ್ನವರು ಕೂಡದೆ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ*

ಉ) *ಗೋವಿನ ಜೋಳವನ್ನು ಖರೀದಿ ಮಾಡಿರುವ ಹಣದ ಮೊತ್ತವೆಷ್ಟು ಮತ್ತು ಇನ್ನೂ ಎಷ್ಟು ಜನ ರೈತರಿಗೆ ಹಣವನ್ನು ಕೊಡಬೇಕಾಗಿರುವುದು.*

ಊ) *ಎಷ್ಟು ಹಣವು ಎಷ್ಟು ದಿನಗಳಿಂದ ಸಂದಾಯವಾಗದೇ ಇರುವುದು, ಹಾಗೂ ಇನ್ನೂ ಎಷ್ಟು ದಿವಸಗಳಲ್ಲಿ ರೈತರಿಗೆ ಹಣವನ್ನು ಕೊಡಲಾಗುವುದು?*

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಭಾರತ ಆಹಾರ ನಿಗಮದ ಪರವಾಗಿ ಮಾರ್ಕೆಟಿಂಗ್ ಫೆಡರೇಷನ್ ಖರೀದಿ ಮಾಡುತ್ತಿದೆ.

ಆ) ಇದುವರೆಗೂ 33,521 ಕ್ವಿಂಟಾಲ್

ಇ) 1.60 ಕೋಟಿ ರೂಪಾಯಿಗಳು ಮಾತ್ರ.

ಈ) ಹೌದು

ಉ) ಗೋವಿನ ಜೋಳ ಖರೀದಿ ಮಾಡಿದ ಮೊತ್ತ ರೂ. 95,53,485 ಗಳು.ಇದಲ್ಲಿ 60 ಲಕ್ಷ ರೂ.ಗಳನ್ನು ಈಗಾಗಲೇ ಪಾವತಿ ಮಾಡಲಾಗಿದ್ದು, ಇನ್ನೂ ಸುಮಾರು 320 ಜನ ರೈತರಿಗೆ ಕೊಡಬೇಕಾಗಿರುವ ಹಣ 47,03,485ರೂ.ಗಳು.

ಊ) ರೂ. 33.50 ಲಕ್ಷಗಳು, ಸುಮಾರು ಒಂದೂವರೆ ತಿಂಗಳಿಂದ ಬಾಕಿ ಹಣ ಸಂದಾಯವಾಗದೇ ಇರುತ್ತದೆ. 15 ಲಕ್ಷ ರೂಪಾಯಿಗಳನ್ನು ಕರ್ನಾಟಕ ಸಹಕಾರಿ ಮಾರುಕಟ್ಟೆ ಮಹಾಮಂಡಳಿಗೆ ಕೂಡಲೇ ಬಿಡುಗಡೆ ಮಾಡಲಾಗುವುದು. ಒರಟು ಧಾನ್ಯ ಮತ್ತು ಭತ್ತವನ್ನು ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿಸುವ ಜವಾಬ್ದಾರಿ ಭಾರತ ಆಹಾರ ನಿಗಮ ಇವರಿಗೆ ವಹಿಸಿಕೊಡಲಾಗಿದೆ. ಆವರ ಪರವಾಗಿ ಕರ್ನಾಟಕ ಸರ್ಕಾರದವರು ಈ ಜವಾಬ್ದಾರಿಯನ್ನು ಕರ್ನಾಟಕ ಆಹಾರ ಮತ್ತು